ಶ್ರೀ ರಾಮಕೃಷ್ಣ ಹೆಗ್ಗಡೆ :—ಇಂಥ ಸ್ಥಳದಲ್ಲಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಎರಡು ವರ್ಷಗಳಿಂದ ಪ್ರಾರಂಭವಾಗುವುದರಿಂದ ಅದನ್ನು ಅಪೆಸ್ ಮಾಡಬೇಕಾಗುತ್ತದೆ.

Sri D. PARAMESWARAPPA.—The Hon'ble Minister stated that the amount under the scheme could be utilised for rural roads. Is it a fact that instructions have been issued recently that the amount should not be utilised on rural roads ?

Sri RAMAKRISHNA HEGDE.—I pointed out that construction of roads gets the last priority. That is not the purpose for which we are spending this money. We want to spend the money for productive purposes like digging irrigation wells and so on.

ಶ್ರೀ ಎಚ್. ಡಿ. ದೇವೇಗೌಡ.—ಸಾಯಿರ್ ಕಾರ್ಪೊರೇಷನ್ ಕಾರ್ಯಕ್ರಮದಲ್ಲಿ ಸಾಕಷ್ಟು ಟೆಕ್ನಿಕರ್ ಅಸಿಸ್ಟೆನ್ಸ್ ಇಲ್ಲದೇ ಇರುವುದರಿಂದ ಅನನುಕೂಲವಾಗಿದೆ. ಈ ತೊಂದರೆಯನ್ನು ನಿರಿಪಡಿಸಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಡೆ.—ಅದು ಸಾಕಷ್ಟು ಪ್ರಮಾಣದಲ್ಲಿಲ್ಲ ಎಂಬುದು ನಿಜ. ಯಾವ ಕೆಲಸ ಮಾಡುವುದಕ್ಕೆ ಸಾಧ್ಯವೋ ಅದನ್ನು ತೆಗೆದುಕೊಳ್ಳುತ್ತೇವೆ. ಎಲ್ಲಿ ಟೆಕ್ನಿಕರ್ ಅಸಿಸ್ಟೆನ್ಸ್ ಬೇಕಾಗುತ್ತದೆಯೋ ಅಲ್ಲಿ ಅದನ್ನು ಮೊದಲು ಪೂರೈಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಇಂಥ ಒಂದು ಜಾಗ ಇದ್ದರೆ ಅದನ್ನು ಹೇಳುತ್ತೀರಾ ?

Sri RAMAKRISHNA HEGDE.—I am prepared to give the list or lay it on the Table of the House.

Construction of High School Buildings at Santhebachahalli and Agalya in Krishnarajapet Taluk.

*Q.—291. Sri N. NANJE GOWDA (Krishnarajapet).—

Will the Government be pleased to state :—

(a) the amount deposited by the public for the construction of High School building at Santhebachahalli and Agalya in Santhebachahalli Hobli, Krishnarajapet Taluk, together with the date of deposit ;

(b) when tenders were called for, for this purpose ;

(c) the reasons for not commencing the work in spite of accepting the tenders ?

A.—S. R. KANTHI (Minister for Education).—

(a) Rs. 30,000 each in 1951.

(b) No tenders were called for.

(c) Does not arise. The work was to have been executed by the former District Board, Mandya. On the abolition of the District Boards in 1959, the estimate was transferred to the Public Works Department. Revised estimates are under submission to Government.

ಶ್ರೀ ಎನ್. ನಂಜೇಗೌಡ.—ಈ ಸ್ಕೂಲು ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ ಎಸ್ಟಿಮೇಟು ಆಗಿದೆಯೇ ?

† ಶ್ರೀ ಎಸ್. ಆರ್. ಕಂಠಿ.—ಪ್ರತಿಯೊಂದು ಕಟ್ಟಡಕ್ಕೆ ರಿಜಿಸ್ಟ್ರೇಷನ್ ಎಸ್ಟಿಮೇಟು 55,100 ರೂಪಾಯಿ ಆಗಿದೆ.

ಶ್ರೀ ಎನ್. ನಂಜೇಗೌಡ.—ಒಂದು ಕಟ್ಟಡಕ್ಕೆ 30 ಸಾವಿರ ರೂಪಾಯಿಯಂತೆ 60 ಸಾವಿರ ರೂಪಾಯಿ ಡಿಪಾಜಿಟ್ ಮಾಡಿ 14 ವರ್ಷವಾಯಿತು. ದಯವಿಟ್ಟು ಈ ವರ್ಷ ಜಾಗ್ರತೆ ಕಟ್ಟಡ ಕೆಲಸ ಕೈಕೊಳ್ಳುವ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಡಿಸ್ಟ್ರಿಕ್ಟ್ ಬೋರ್ಡಿನಿಂದ ತಾಲ್ಲೂಕ ಬೋರ್ಡಿಗೆ ಈ ಸ್ಕೂಲುಗಳು ಬಂದಿವೆ. ಸರಕಾರದವರು ಒಂದು ಸ್ಕೂಲಿಗೆ 12 ಸಾವಿರ, ಇನ್ನೊಂದು ಸ್ಕೂಲಿಗೆ 10,500 ರೂಪಾಯಿ ಗ್ರಾಂಟು ಕೊಟ್ಟಿದ್ದಾರೆ. ಇನ್ನೂ ಸ್ವಲ್ಪ ಹಣ ತಾಲ್ಲೂಕ್ ಬೋರ್ಡು ಕೊಡಬೇಕಾಗುತ್ತದೆ.

ಶ್ರೀ ಎನ್. ನಂಜೇಗೌಡ.—ಶೇಕಡ 50 ರಷ್ಟು ಸರಕಾರ ಕೊಡಬೇಕು ಎಂದು ಇದ್ದುದರಿಂದ ಸಾರ್ವಜನಿಕರಿಂದ 30 ಸಾವಿರ ರೂಪಾಯಿ ಡಿಪಾಜಿಟ್ ಮಾಡಲಾಗಿದೆ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಶೇಕಡ 50 ರಷ್ಟು ಕೊಡುವುದನ್ನು ಸರಕಾರ ಒಪ್ಪಿಲ್ಲ. ಇದು ಅನೇಕ ವರ್ಷಗಳಿಂದ ಕರೆಸ್ಪಾಂಡೆನ್ಸ್‌ನಲ್ಲಿದೆ. ಒಂದು ಸ್ಕೂಲು ಕಟ್ಟಡಕ್ಕೆ 12 ಸಾವಿರ ಇನ್ನೊಂದಕ್ಕೆ 10,500 ರೂಪಾಯಿ ಕೊಡುತ್ತೇವೆ ಎಂದು ಸ್ಪಷ್ಟಪಡಿಸಿದೆ. ಉಳಿದ ಹಣವನ್ನು ತಾಲ್ಲೂಕ್ ಬೋರ್ಡ್ ಕೊಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಜಿಲ್ಲಾ ಬೋರ್ಡು ಜನಗಳಿಗೆ ಪುನರಾಯಿಸಿ 30 ಸಾವಿರ ರೂಪಾಯಿ ಜಮಾ ಮಾಡಿ ಡಿಪಾಜಿಟ್ ಮಾಡಿದೆ.....

ಅಧ್ಯಕ್ಷರು.—"ಪುನರಾಯಿಸಿ" ಎಂದು ಹೇಳದೆ "ಪ್ರೋತ್ಸಾಹಿಸಿ" ಎಂದು ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಜನರನ್ನು ಪ್ರೋತ್ಸಾಹಿಸಿ ಜನಗಳಿಂದ ಹಣ ವಸೂಲ್ಮಾಡಿ ಡಿಪಾಜಿಟ್ ಮಾಡಿದ್ದಾರೆ. ಸರಕಾರದ ನೀತಿ ಶೇಕಡ 50 ರಷ್ಟು ಕೊಡಬೇಕು ಎಂದಿದೆ. ಈ ನೀತಿ ಪ್ರಕಾರ ಹಣ ಕೊಟ್ಟು ಈ ಪಾಠಶಾಲೆ ಕಟ್ಟಡ ಕಟ್ಟಿಸುವುದಕ್ಕೆ ಸೂಕ್ತ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗ್ಗೆ ಆ ನೀತಿ ಇದ್ದಿತು. ಆದರೆ ಕರೆಸ್ಪಾಂಡೆನ್ಸ್ ನಡೆದು 9-12-1958 ನೇ ದಿನ ಈ ಮೊದಲು ನಾನು ಹೇಳಿದ ಹಾಗೆ ಹಣ ಕೊಡುತ್ತೇನೆಂದು ಒಪ್ಪಿಕೊಂಡಿತು. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ವಜಾ ಆಗಿ ತಾಲ್ಲೂಕ್ ಬೋರ್ಡ್ ಬಂದಿದೆ. ಅವರು ಈ ಕೆಲಸ ತಗೆದುಕೊಂಡು ಕಟ್ಟಡ ಕಟ್ಟಿಸುವುದು ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—30 ಸಾವಿರ ರೂಪಾಯಿಗಳ ಡಿಪಾಜಿಟ್ಟು ಮೇರೆ 4 ಪರ್ಸೆಂಟ್ ಬಡ್ಡಿ ದರದಂತೆ ಕಳೆದ 14 ವರ್ಷಗಳಲ್ಲಿ 17 ಸಾವಿರ ರೂಪಾಯಿ ಬಡ್ಡಿಯಾಗುತ್ತದೆ. ಅಷ್ಟು ಹಣ ಕೊಟ್ಟು ಕಟ್ಟಡ ಕಟ್ಟಿಸುವುದಕ್ಕೆ ಪಾಗ್ವಾನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಸರಕಾರದ ತಪ್ಪು ಏನೂ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಈ ಕೆಲಸ ಮಾಡಬೇಕಾಗಿತ್ತು. ಡಿಸ್ಟ್ರಿಕ್ಟ್ ಬೋರ್ಡ್ ಹೋದ ಮೂಲಕ ತಾಲ್ಲೂಕ್ ಬೋರ್ಡಿಗೆ ಬಂದುದರಿಂದ ತಾಲ್ಲೂಕ್ ಬೋರ್ಡು ಮಾಡಬೇಕಾಗಿತ್ತು. ಇದಕ್ಕೆ ಬಡ್ಡಿ ಕೊಡುವುದಕ್ಕಾಗುವುದಿಲ್ಲ.

Tek Chand Report on Prohibition

*Q.—329. Sri GANJI VEERAPPA (Harihar).—

Will the Government be pleased to state :—

(*a*) whether Government have considered the Tek Chand report on Prohibition and taken any decision on the same ;

(*b*) whether Government are contemplating the revision of their Prohibition Policy ;

(*c*) whether Government of India have invited suggestions from the State Government regarding the Tek Chand Committee report ;

---

†Indicates that the remarks or speeches have not been revised by the member concerned